


ಪೋ ಬಾಲ್ಯಕ್ಕೆ ಕಣ್ಣುಬಿಟ್ಟ ಪಿನೋ ಟ್ರೋಂಜಾನೋ ರೈಲ್ವೆ ನಿಲ್ದಾಣ

ಮಾರನೆಯ ದಿನ ನಾನು ಕಂಡದ್ದೇನೆಂದರೆ, ಸದರಿ ವ್ಯಕ್ತಿಯನ್ನು ಲುಯಿನೋ ಜೈಲಿಗೆ ಹಾಕುವ ಸಲುವಾಗಿ ಟ್ರಕ್ಕೊಂದಕ್ಕೆ ತಳ್ಳಲಾಗುತ್ತಿತ್ತು. ಆ ಘಟನೆಯ ಅನಂತರ ಅಪ್ಪ ರಾಜಕೀಯ ಗಡಿಪಾರುಗಳು ಮುಂತಾದವುಗಳ ಬಗ್ಗೆ ಮಾತನಾಡಿದ್ದರು. ಆಗದು ನನಗೆ ಅಷ್ಟು ಅರ್ಥವಾಗಿರಲಿಲ್ಲ. ಆದರೆ, ಆ ರಾತ್ರಿಯ ಆ ಘಟನೆ ಅಳಿಸಲಾರದ ಕಪ್ಪು ಕಲೆಯಂತೆ ನನ್ನ ಮನದಲ್ಲಿ ಉಳಿದುಬಿಟ್ಟಿದೆ.

## ವಾರಿಗೆಯ ಹುಡುಗರು

ನನ್ನ ವಾರಿಗೆಯ ಹುಡುಗರೊಂದಿಗೆ ಆಡಬೇಕೆಂದರೆ ನಾನು ಬಂಡೆಯನ್ನು ಕಡಿದು ಮಾಡಲಾಗಿದ್ದ ದಾರಿ ಸಾಗುತ್ತಿದ್ದ ಆ ಹಳ್ಳಿಗೇ ಹೋಗಬೇಕಿತ್ತು. ಆ ಹಳ್ಳಿಯ ಹೆಸರು ಪಿನೋ. ಅದೋ ಭಯಂಕರ ಏರು ದಾರಿ. ಆ ದಾರಿಯಲ್ಲಿ ಮುನ್ನೂರು ಗಜಗಳಷ್ಟು ಹತ್ತಿ ಹಳ್ಳಿಯನ್ನು ತಲುಪುವುದರೊಳಗೆ ಕಾಲುಗಳೇ ಬಿದ್ದೋಗುವಷ್ಟು ಸಾಕಾಗಿಹೋಗುತ್ತಿತ್ತು. ಅಲ್ಲಿನ ನನ್ನ ವಾರಿಗೆಯವರೊಂದಿಗೆ ಗೆಳೆತನ ಬೆಳೆಸುವುದು ಅಂಥಾ ಕಷ್ಟದ ಸಂಗತಿಯಾಗಿರಲಿಲ್ಲ. ಅವರೆಲ್ಲಾ ಅಲ್ಲಿದ್ದ ಚರ್ಚಿನ ಹೊರ ಮೊಗಸಾಲೆಯಲ್ಲಿ ಕೂಡುತ್ತಿದ್ದರು. ಅವರಿಗೆ ನನ್ನಂಥ 'ಹೊರಗಿನವನ' ಬಗ್ಗೆ ಎಳ್ಳಷ್ಟೂ ಕೂತೂಹಲವಿರುತ್ತಿರಲಿಲ್ಲ. ಅವರೆಲ್ಲಾ ಒರಟು ಸ್ವಿಸ್ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅಲ್ಲದೆ ನನ್ನನ್ನು ತಮಾಷೆ ಮಾಡಿಕೊಂಡು ಗೋಳುಹೊಯ್ದುಕೊಂಡು ನಗಾಡುತ್ತಿದ್ದರು. ಅದೊಂದು ರೀತಿಯ ಪುಂಡರ ಗುಂಪು. ಈ ಪುಂಡರ ಗುಂಪಿನ ಬಹುತೇಕರು ಕಳ್ಳ ಸಾಗಾಣಿಕೆದಾರರ ಮಕ್ಕಳಾಗಿದ್ದರು. ಅಪವಾದ ಎಂಬಂತೆ, ಆ ಗ್ಯಾಂಗಿನ ಲೀಡರ್ ಆಗಿದ್ದವನು ಅಲ್ಲಿನ ಪೊಲೀಸ್ ಮುಖ್ಯಸ್ಥನ ಮಗನಾಗಿದ್ದ! ಆ ಗುಂಪಿನಲ್ಲಿ ಇಬ್ಬರು ಹೆಣ್ಣುಮಕ್ಕಳೂ ಇದ್ದರು. ಅವರ ಅಪ್ಪಂದಿರು ಕಸ್ಟಮ್ ಅಧಿಕಾರಿಗಳಾಗಿದ್ದ ಕಾರಣಕ್ಕೆ ಅವರನ್ನು ನಮ್ಮ ಜೊತೆ ಸೇರಲು ಬಿಡುತ್ತಿರಲಿಲ್ಲ.

ಎತ್ತರದ ಗುಡ್ಡಗಳ ತುತ್ತ ತುದಿಗಳಲ್ಲಿ ಅಲೆದಾಡುವುದು, ಬಂಡೆಗಳನ್ನು ಕೊರೆದು ಜಾಡು